ಎಸ್.ಎಮ್.ಎ. ಟ್ರಸ್ಟ್,
ಶಿವಾನಂದ ಮಹಾವಿದ್ಯಾಲಯ, ಕಾಗವಾಡ.

52 ನೇ ಕ್ರೀಡಾ ದಿನಾಚರಣೆ
12ನೇ ಏಪ್ರಿಲ್-2019.

ಪ್ರೊ.ಆರ್.ಎಸ್.ನಾಗರಡ್ಡಿ
ದೈಹಿಕ ಶಿಕ್ಷಣ ಬೋಧಕರು

ವಾರ್ಷಿಕ ಕ್ರೀಡಾ ವರದಿ
ಡಾ.ಎಸ್.ಎ.ಕರ್ಕಿ
ಕಾರ್ಯಾಧ್ಯಕ್ಷರು.

ಅರಾಧ್ಯ ದೈವ ಗುರುಗಳಾದ

ಪ. ಪೂ. ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರು,
ಪ. ಪೂ. ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು,

ಆಡಳಿತ ಮಂಡಳಿ - ಏಕಸ್ಯಾಸಧಾರಿಗಳಾದ ಪ.ಪೂ. ಶ್ರೀ ಯತೀಶ್ವರಾನಂದ ಮಹಾಸ್ವಾಮಿಗಳವರು,
- ಕಾರ್ಯಾಧ್ಯಕ್ಷರಾದ ಪ.ಪೂ. ಶ್ರೀ ಅದೃಶ್ಯಕಾಡಸಿದ್ಧೇಶ್ವರ ಮಹಾಸ್ವಾಮಿಗಳವರ,
ಚರಣಕ್ಕೆ ಭಕ್ತಿ ಪೂರ್ವಕವಾಗಿ ನಮಿಸಿ-

ಶ್ರೋತಿಯ ಬ್ರಹ್ಮನಿಷ್ಠ ಪ. ಪೂಜ್ಯರು, ಮಹಾವಿದ್ಯಾಲಯದ ಕಂಪು ಸೂಸುವ ಪುಷ್ಪವಾಗಿ ಅರಳಿದ ಇಂದಿನ ಅತಿಥಿಗಳಾದ ಡಾ. ಎಸ್.ಎಂ. ಜೋಶಿ, ಪ್ರಾಚಾರ್ಯರು, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಉಗಾರ-ಖುರ್ದ, ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟ ಸದಸ್ಯರು, ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿ ಮತ್ತು ಶ್ರೀ ಅಶೋಕ ಎಂ. ದೇಶಿಂಗೆ, ಗೆಜಿಟೆಡ್ ಉಪ-ಖಜಾನೆ ಅಧಿಕಾರಿಗಳು, ರಾಯಬಾಗ. ಉಪಸ್ಥಿತಿ ನೀಡಿದ ಆಡಳಿತ ಮಂಡಳಿಯ ಸದಸ್ಯರೇ ಅಧ್ಯಕ್ಷತೆವಹಿಸಿದ ಪ್ರಾಚಾರ್ಯ ಡಾ.ಜಿ.ಜಿ.ಕರಲಟ್ಟಿ, ಸದಸ್ಯರೆ, ಪತ್ರಕರ್ತರೆ, ಪ್ರಾಧ್ಯಾಪಕ ಬಂಧುಗಳೆ, ವಿದ್ಯಾರ್ಥಿ ಮಿತ್ರರೆ -

ಪ್ರಸಕ್ತ ಶೈಕ್ಷಣಿಕ ವರ್ಷ 2018-19ರ ಪೂರ್ಣಾವಧಿಯಲ್ಲಿ ಮಹಾವಿದ್ಯಾಲಯದ ಕ್ರೀಡಾ ವಿಭಾಗದ ಆಶ್ರಯದಲ್ಲಿ ಹಮ್ಮಿಕೊಂಡ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ತಮ್ಮ ಮುಂದೆ ಪ್ರಚುರಪಡಿಸಲು ಸಂತೋಷವೆನಿಸುತ್ತದೆ.

ಈ ವರ್ಷದ ಕ್ರೀಡಾ ಚಟುವಟಿಕೆಗಳನ್ನು ದಿನಾಂಕ : 31.08.2018 ರಂದು ಪ್ರಾಚಾರ್ಯ ಡಾ.ಜಿ.ಜಿ.ಕರಲಟ್ಟಿ ಅವರು ಪೂಜೆ ನೆರವೇರಿಸಿ ಉದ್ಘಾಟಿಸಿದರು. ಅಂದಿನಿಂದಲೇ, ವಿವಿಧ ಆಟಗಳ ಆಯ್ಕೆ ಪ್ರಕ್ರಿಯೆ ಪ್ರಾರಂಬಗೊಂಡವು. ಅಥ್ಲೇಟಿಕ್ಸ್, ಥ್ರೋಬಾಲ್, ವ್ಹಾಲಿಬಾಲ್ ಟೆನ್ನಿಕ್ವಾಯಿಟ್, ಕಬಡ್ಡಿ, ಖೋ-ಖೋ, ಬಾಲ್‌ಬ್ಯಾಡ್ಮಿಂಟನ್ ಮತ್ತು ಕ್ರಿಕೇಟಗಳ ತಂಡಗಳನ್ನು ಆಯ್ಕೆ ಮಾಡಿ, ಕ್ರೀಡಾ ನಿರ್ದೇಶಕರಾದ ಶ್ರೀ ಆರ್.ಎಸ್.ನಾಗರಡ್ಡಿ ಇವರು ತರಬೇತಿ ನೀಡಿದರು. "Whoever said it's not whether you win or lose that counts' probably lost" ಎನ್ನುವಂತೆ ಅವರ ಮಾರ್ಗದರ್ಶನದಡಿಯಲ್ಲಿ ನಮ್ಮ ಕ್ರೀಡಾ ಪಟುಗಳು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯದ ಈ ಕೆಳಗಿನ ಅಂತರ-ಕಾಲೇಜು ಸ್ಪರ್ಧೆಗಳಲ್ಲಿ ಭಾಗವಹಿಸಿದರು.

		ಮಹಿಳೆಯರ ವಿಭಾಗದಲ್ಲಿ	
1	ಕು. ಸುಹಾಸಿನಿ ಜೆ. ಮಗದುಮ್	ಬಿ.ಎ-1	ಟ್ರ್ಯಾಕ್ & ಫೀಲ್ಡ್ ಚ್ಯಾಂಪಿಯನ್
2	ಕು. ಪ್ರಿಯಂಕಾ ಆರ್. ನಾಗಾವೆ	ಬಿ.ಕಾಂ-2	ಮೈನರ್ ಗೇಮ್ಸ್ ಚ್ಯಾಂಪಿಯನ್
		ಜನರಲ್ ಚ್ಯಾಂಪಿಯನ್	
3	ಕು. ಪ್ರಿಯಂಕಾ ಆರ್. ನಾಗಾವೆ	ಬಿ.ಕಾಂ-2	ವಿನ್ನರ
4	ಕು. ಮೇಘಾ ಆರ್. ಜಾಧವ	ಬಿ.ಕಾಂ-2	ರನ್ನರ್ಸಪ್ &
5	ಕು. ಜಯಶ್ರೀ ಜೆ. ಕಾಳೆ	ಬಿ.ಕಾಂ-2	ರನ್ನರ್ಸಪ್

		ಪುರುಷರ ವಿಭಾಗದಲ್ಲಿ	
1	ಶ್ರೀ. ಓಂಕಾರ ಎ. ಪಾಟೀಲ	ಬಿ.ಕಾಂ-1	ಟ್ರ್ಯಾಕ್ & ಫೀಲ್ಡ್ ಚ್ಯಾಂಪಿಯನ್
2	ಶ್ರೀ. ಕಾರ್ತಿಕ ಸಾಂಳುಂಕೆ	ಬಿ.ಕಾಂ - 3	ಮೈನರ್ ಗೇಮ್ಸ್ ಚ್ಯಾಂಪಿಯನ್
3	ಶ್ರೀ. ಓಂಕಾರ ಬಿ. ಬಾಳಿಕಾಯಿ	ಬಿ.ಎ-2	ಸ್ವಿಮಿಂಗ್ ಚ್ಯಾಂಪಿಯನ್
		ಜನರಲ್ ಚ್ಯಾಂಪಿಯನ್	
4	ಶ್ರೀ. ಓಂಕಾರ ಎ. ಪಾಟೀಲ	ಬಿ.ಕಾಂ-1	ವಿನ್ನರ
5	ಶ್ರೀ. ಓಂಕಾರ ಬಿ. ಬಾಳಿಕಾಯಿ	ಬಿ.ಎ-2	ರನ್ನರ್ಸಪ್

1. 2018-19 ನೇ ಸಾಲಿನ ವಾರ್ಷಿಕ ಕ್ರೀಡಾಕೂಟವು ದಿನಾಂಕ : 31 ಅಗಸ್ಟ್, ಸಂಪ್ಟೆಂಬರ 01 ಮತ್ತು 02-2018 ರಂದು ನಮ್ಮ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾ ಕೂಟ ಮತ್ತು ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳ ಕ್ರೀಡಾ ಪಟುಗಳ ಆಯ್ಕೆಯನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಮಹಾವಿದ್ಯಾಲಯದ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ದಿಸಿದ್ದಾರೆ. ಈ ಕೆಳಗಿನವರು ಚಾಂಪಿಯನ್‌ರಾಗಿ ಹೊರಹೊಮ್ಮಿದ್ದಾರೆ.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

2. **ದಿನಾಂಕ 06, 07 ಸಪ್ಟೆಂಬರ್ 2018ರಂದು** ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಪುರುಷರ ಫುಟಬಾಲ್ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ನಮ್ಮ ಮಹಾವಿದ್ಯಾಲಯದ ಕು. ಚಿದಾನಂದ ಎಸ್. ಮಗದುಮ್ ಬಿ.ಎಸ್ಸಿ -1 ವಿದ್ಯಾರ್ಥಿಯ ನಾಯಕತ್ವದಲ್ಲಿ 05 ವಿದ್ಯಾರ್ಥಿಗಳು ಪಾಲ್ಗೊಂಡು ಉತ್ತಮ ಸಾಧನೆ ಮಾಡಿದ್ದಾರೆ.

3. **ದಿನಾಂಕ 08 ಮತ್ತು 09ನೇ ಸಪ್ಟೆಂಬರ್ 2018ರಂದು** ಮರಾಠಾ ಮಂಡಳ ಕಾಲೇಜ್ ಖಾನಾಪೂರದಲ್ಲಿ ನಡೆದ ಮಹಿಳೆಯರ ಜೋ ಜೋ ಪಂದ್ಯಾವಳಿಯಲ್ಲಿ ಕು. ಮೇಘಾ ಆರ್. ಜಾಧವ ನಾಯಕತ್ವದಲ್ಲಿ 12 ವಿದ್ಯಾರ್ಥಿನಿಯರು ಪಾಲ್ಗೊಂಡು ಉತ್ತಮ ಸಾಧನೆ ಮಾಡಿದ್ದಾರೆ. ಅದರಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡದ ಆಯ್ಕೆಯಲ್ಲಿ 04 ವಿದ್ಯಾರ್ಥಿನಿಯರು ಪಾಲ್ಗೊಂಡು ಕು. ಜಯಶ್ರೀ ಜೆ. ಕಾಳೆ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡಕ್ಕೆ ಆಗಿ ಅಂತರ ವಿಶ್ವವಿದ್ಯಾಲಯಗಳ ಜೋ ಜೋ ಪಂದ್ಯಾವಳಿಯು ಮಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾವಳಿಯಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾಳೆ.

4. **ದಿನಾಂಕ : 11 ಮತ್ತು 12 ಸಪ್ಟೆಂಬರ್ 2018ರಂದು** ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಇಳಕಲ್‌ದಲ್ಲಿ ನಡೆದ ಪುರುಷರ್ ಜೋ ಜೋ ಪಂದ್ಯಾವಳಿಯಲ್ಲಿ ಶ್ರೀ. ಸಮ್ಮೇದ ಗಿರಗಾಂವೆ ನಾಯಕತ್ವದಲ್ಲಿ 12 ವಿದ್ಯಾರ್ಥಿಗಳು ಪಾಲ್ಗೊಂಡು ಉತ್ತಮ ಸಾಧನೆ ಮಾಡಿದ್ದಾರೆ.

5. **ದಿನಾಂಕ : 17, 18 ಮತ್ತು 19 ಸಪ್ಟೆಂಬರ್ 2018ರಂದು** ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ವಿಜಯಪುರದಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಪುರುಷರ ಕಬಡ್ಡಿ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ನಮ್ಮ ಮಹಾವಿದ್ಯಾಲಯದ 03 ವಿದ್ಯಾರ್ಥಿಗಳು ಪಾಲ್ಗೊಂಡು ಉತ್ತಮ ಸಾಧನೆ ಮಾಡಿದ್ದಾರೆ.

6. **ದಿನಾಂಕ 24, 25 ಸಪ್ಟೆಂಬರ್ 2018ರಂದು** ಎಸ್. ಡ್ಬಿಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹಾರೂಗೇರಿಯಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಪುರುಷರ್ ವಾಲಿಬಾಲ್ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ನಮ್ಮ ಮಹಾವಿದ್ಯಾಲಯದ ಕು. ಸಚಿನ್ ಜೆ. ಖುರಪೆ. ಬಿ.ಎಸ್ಸಿ-3 ವಿದ್ಯಾರ್ಥಿಯ ನಾಯಕತ್ವದಲ್ಲಿ 3 ವಿದ್ಯಾರ್ಥಿಗಳು ಪಾಲ್ಗೊಂಡು ಉತ್ತಮ ಸಾಧನೆ ಮಾಡಿದ್ದಾರೆ.

7. **ದಿನಾಂಕ 26, 27 ಮತ್ತು 28 ಸಪ್ಟೆಂಬರ್ 2018ರಂದು** ನಮ್ಮ ಮಹಾವಿದ್ಯಾಲಯದಲ್ಲಿ ಪುರುಷ ಮತ್ತು ಮಹಿಳೆಯರ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಅಂತರ್ ಕಾಲೇಜು ಚದುರಂಗ ಪಂದ್ಯಾವಳಿಯನ್ನು ಸಂಘಟಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ ಪುರುಷರ 40 ತಂಡಗಳು ಪಾಲ್ಗೊಂಡು ಮತ್ತು ಮಹಿಳೆಯರ 16 ತಂಡಗಳು ಪಾಲ್ಗೊಂಡಿದ್ದವು. ಈ ಪಂದ್ಯಾವಳಿಯಲ್ಲಿ ನಮ್ಮ ಮಹಾವಿದ್ಯಾಲಯದ 1) ಜಯಶ್ರೀ ಪೂಜಾರಿ 2) ಸೀಮಾ ತಳವಾರ 3) ಪೂಜಾ ಗಾಡಿವಡ್ಡರ 4) ಆರತಿ ತಳವಾರ 5) ಸ್ವಾತಿ ಮಡಿವಾಳ 6) ಮೇಘಾ ಜಾಧವ ಮಹಿಳೆಯರ ತಂಡವು ದ್ವಿತೀಯ ಸ್ಥಾನ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಹಾಗೇ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡದ ಆಯ್ಕೆಗೆ ಪುರುಷರು 150, ಮಹಿಳೆಯರು 75 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

8. **ದಿನಾಂಕ 09, 10 ಅಕ್ಟೋಬರ್ 2018 ರಂದು** ಬಿ. ಶಂಕರಾನಂದ ಮಹಾವಿದ್ಯಾಲಯ ಕುಡಚಿಯಲ್ಲಿ ಪುರುಷರ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿಯಲ್ಲಿ ನಮ್ಮ ಮಹಾವಿದ್ಯಾಲಯದ ಕು. ಸುಹಾಸಿನಿ ಜೆ. ಮಗದುಮ್ ಪ್ರಥಮ ಬಿ.ಎ ವಿದ್ಯಾರ್ಥಿನಿಯು 75ಇಂ ಕುಸ್ತಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡಕ್ಕೆ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯ ಕುಸ್ತಿ ಪಂದ್ಯಾವಳಿಯಲ್ಲಿ ಬಾಬಾಸಾಹೇಬ ಅಂಬೇಡ್ಕರ್ ವಿಶ್ವವಿದ್ಯಾಲಯ ಔರಂಗಾಬಾದ್ (ಮಹಾರಾಷ್ಟ್ರ)ದಲ್ಲಿ ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾಳೆ.

9. **ದಿನಾಂಕ 13, 14 ಅಕ್ಟೋಬರ್ 2018ರಂದು** ಎಮ್.ಜಿ.ವ್ಹಿ.ಸಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಮುದ್ದೇಬಿಹಾಳದಲ್ಲಿ ಮಹಿಳೆಯರ ಅಂತರ್ ಕಾಲೇಜು ಕಬ್ಬಡ್ಡಿ ಪಂದ್ಯಾವಳಿಯಲ್ಲಿ ಕು. ಸುಹಾಸಿನಿ ಜೆ. ಮಗದುಮ್ ನಾಯಕತ್ವದಲ್ಲಿ 11 ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು, ನಮ್ಮ ಮಹಾವಿದ್ಯಾಲಯವು ದ್ವೀತಿಯ ಸ್ಥಾನ ಪಡೆದು ಮಹಾವಿದ್ಯಾಲಯದ ಕೀರ್ತಿ ಹೆಚ್ಚಿಸಿದ್ದಾರೆ. ಇದರಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡದ ಆಯ್ಕೆಯಲ್ಲಿ 1) ಸುಹಾಸಿನಿ ಮಗದುಮ್ ಮತ್ತು 2) ಪ್ರೀತಿ ನಾಂದನಿ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯಗಳ ಕಬಡ್ಡಿ ಪಂದ್ಯಾವಳಿಯು ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರುನಲ್ಲಿ ಪಾಲ್ಗೊಂಡು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

10. **ದಿನಾಂಕ 22, 23 ಡಿಸೆಂಬರ್ 2018ರಂದು** ಸಿಕ್ಯಾಬ್ ಬಿಬಿಎ ಮತ್ತು ಬಿ.ಎಸ್ಸಿ ಮಹಾವಿದ್ಯಾಲಯ ವಿಜಯಪುರದಲ್ಲಿ ನಡೆದ ಮಹಿಳೆಯರ ಅಂತರ್ ಕಾಲೇಜು ಬಾಲ್ ಬ್ಯಾಡ್‌ಮಿಂಟನ್ ಪಂದ್ಯಾವಳಯಲ್ಲಿ ಕು. ಸೋನಾಲಿ ಎಸ್. ಪೂಜಾರಿ ನಾಯಕತ್ವದಲ್ಲಿ 10 ಜನ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು ಅದರಲ್ಲಿ ಕು. ಸೋನಾಲಿ ಎಸ್. ಪೂಜಾರಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡದ ಬಾಲ್ ಬ್ಯಾಡ್‌ಮಿಂಟನ್ ತಂಡಕ್ಕೆ ಆಯ್ಕೆ ಆಗಿ ಕೃಷ್ಣಾ ವಿಶ್ವವಿದ್ಯಾಲಯ ಕುಪ್ಪಮ್ (ಆಂಧ್ರ ಪ್ರದೇಶ)ನಲ್ಲಿ ಪಾಲ್ಗೊಂಡು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

11. **ದಿನಾಂಕ 22, 23 ಮತ್ತು 24 ಅಕ್ಟೋಬರ್ 2018ರಂದು** ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಿಳಗಿಯಲ್ಲಿ ನಡೆದ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಬೆಳಗಾವಿಯ ಅಥ್ಲೇಟಿಕ್ ಮಿಟ್‌ದಲ್ಲಿ ನಮ್ಮ ಮಹಾವಿದ್ಯಾಲಯದ ಕು. ಸುಹಾಸಿನಿ ಮಗದುಮ್ ನಾಯಕತ್ವದಲ್ಲಿ 08 ವಿದ್ಯಾರ್ಥಿನಿಯರು ಮತ್ತು 10 ಪುರುಷ ವಿದ್ಯಾರ್ಥಿಗಳು ಪಾಲ್ಗೊಂಡು ಇದರಲ್ಲಿ

    1. ಸುಹಾಸಿನಿ ಜೆ. ಮಗದುಮ್ – ಚಕ್ರ ಎಸೆತದಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡದ ಹೊಸ ದಾಖಲೆಯನ್ನು ಬರೆದು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡಕ್ಕೆ ಆಯ್ಕೆ ಆಗಿ ಮಂಗಳೂರು ವಿಶ್ವವಿದ್ಯಾಲಯದ ಆಳ್ವಾಸ್‌ದಲ್ಲಿ ನಡೆದ ಅಂತರ್ ವಿಶ್ವವಿದ್ಯಾಲಯ ಅಥ್ಲೇಟಿಕ್ ಮಿಟ್‌ದಲ್ಲಿ ಭಾಗವಹಿಸಿದ್ದಾಳೆ.
    2. ಜಯಶ್ರೀ ಜೆ. ಕಾಳೆ– ಬಿ.ಕಾಂ–2 ರ ವಿದ್ಯಾರ್ಥಿನಿಯು ತ್ರಿವಿಧ ಜಿಗಿತದಲ್ಲಿ ಮೂರನೇ ಸ್ಥಾನ ಪಡೆದು ಕಂಚಿನ ಪದಕ ತಂದಿದ್ದಾಳೆ.
    3. ಪ್ರಿಯಂಕಾ ಆರ್. ನಾಗಾವೆ – ಎತ್ತರ ಜಿಗಿತದಲ್ಲಿ 4ನೇ ಸ್ಥಾನ ಪಡೆದಿದ್ದಾಳೆ.
    4. ಅಮೃತಾ ಪವಾರ – ತ್ರಿವಿಧ ಜಿಗಿತದಲ್ಲಿ 4ನೇ ಸ್ಥಾನ ಪಡೆದಿದ್ದಾಳೆ.
    5. ಓಂಕಾರ ಎ. ಪಾಟೀಲ – 100 ಒಣಧಿ ಓಟದಲ್ಲಿ 4ನೇ ಸ್ಥಾನ ಪಡೆದಿದ್ದಾರೆ.

ಈ ಎಲ್ಲ ವಿದ್ಯಾರ್ಥಿಗಳ ಸಾಧನೆಗೆ ನಮ್ಮ ಮಹಾವಿದ್ಯಾಲಯದ ಉತ್ಸಾಹಿ ದೈಹಿಕ ನಿರ್ದೇಶಕರಾದ ಪ್ರೊ.ಆರ್.ಎಸ್.ನಾಗರಡ್ಡಿ ಅವರ ತರಬೇತಿಯಲ್ಲಿ 06 ವರ್ಷದ ಅವಧಿಯಲಿ ನಮ್ಮ ಮಹಾವಿದ್ಯಾಲಯದಲ್ಲಿ ಸುಮಾರು 34 ವಿಶ್ವವಿದ್ಯಾಲಯದ ಬ್ಲೂಗಳಾಗಿ ಕ್ರೀಡಾ ಪಟುಗಳು ಆಯ್ಕೆಯಾಗಿದ್ದಾರೆ. ಅವರು 2018–19ನೇ ವರ್ಷ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ತಂಡದ ಚದುರಂಗ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು, ಮಹಿಳೆಯರ ಕಬಡ್ಡಿ ಪಂದ್ಯಾವಳಿಯ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು ಮತ್ತು ಮಹಿಳೆಯರ ಬಾಲ್ ಬ್ಯಾಡ್ಮಿಟನ್ ಆಯ್ಕೆ ಸಮಿತಿಯ ಸದಸ್ಯರಾಗಿದ್ದರು. ಇವರ ಸಾಧನೆಗೆ ಪ್ರಾಚಾರ್ಯರು, ಸಿಬ್ಬಂದಿ ವರ್ಗ ಮತ್ತು ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳು.

ಇವರಿಗೆಲ್ಲ ಅಭಿನಂದನೆಗಳನ್ನು ಹೇಳುತ್ತಾ –

" ವಿದ್ಯಾರ್ಥಿಗಳ ಭಾಗವಹಿಸುವಿಕೆಯೇ ನೆನಪು ನಿರಂತರ

ಮತ್ತು ನೆನಪೇ ಸದಾ ಹೆಸರು – ಉಸಿರು"

ಈ ಎಲ್ಲ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಲು ಪ್ರೋತ್ಸಾಹಿಸಿದ ಪ್ರಾಚಾರ್ಯ ಡಾ.ಜಿ.ಜಿ.ಕರಲಟ್ಟಿ ಹಾಗೂ ಶ್ರಮಿಸಿದ ಜಿಮಖಾನಾ ಚೇರಮನ್‌ರಾದ ಡಾ.ಎಸ್.ಎ.ಕರ್ಕಿ, ಕ್ರೀಡಾ ಸಮಿತಿಯ ಸರ್ವ ಸದಸ್ಯರು, ದೈಹಿಕ ಶಿಕ್ಷಣ ಬೋಧಕರಾದ ಪ್ರೊ. ಆರ್.ಎಸ್.ನಾಗರಡ್ಡಿ ಮತ್ತು ಕ್ರೀಡಾ ಕಾರ್ಯದರ್ಶಿಯಾದ ಕು. ಮೇಘಾ ಆರ್. ಜಾಧವ, ಎಲ್ಲ ಪ್ರಾಧ್ಯಾಪಕ ಬಂಧುಗಳು, ವಿದ್ಯಾರ್ಥಿ ವೃಂದಕ್ಕೆ ವಂದನೆಗಳನ್ನು ಹೇಳಿ ವರದಿಗೆ ವಿರಾಮ ನೀಡುತ್ತೇನೆ.

Dr. S. O. Halasagi
I/c. PRINCIPAL,
Shivanand College,
Kagwad, Dist. Belgaum

Scanned by CamScanner

ಶ್ರೀ. ಮ.ಅ.ಟ್ರಸ್ಟ್‌ನ
ಶಿವಾನಂದ ಮಹಾವಿದ್ಯಾಲಯ, ಕಾಗವಾಡ
ವಾರ್ಷಿಕ ದಿನಾಚರಣೆ – 13ನೇ ಏಪ್ರಿಲ್ – 2019

ದಿನಾಂಕ :

ವಾರ್ಷಿಕ ವರದಿ :

13/04/2019

ಮಹಾವಿದ್ಯಾಲಯದ ಸ್ಥಾಪನೆಗೆ ಕಾರಣಿಕರ್ತರಾದ ಪ್ರಾತಸ್ಮರಣೀಯ ವೇದಾಂತ ಕೇಸರಿ ಪ.ಪೂ.ಶ್ರೀ. ಮಲ್ಲಿಕಾರ್ಜುನ ಸ್ವಾಮೀಜಿಯವರನ್ನು, ವಿಶ್ವ ಸಂತರು ಜ್ಞಾನನಿಧಿ ನಡೆದಾಡುವ ದೇವರೆಂದೇ ಖ್ಯಾತರಾದ ಪ.ಪೂ.ಶ್ರೀ. ಸಿದ್ಧೇಶ್ವರ ಮಹಾಸ್ವಾಮೀಜಿಯವರನ್ನು, ಆಡಳಿತ ಮಂಡಳಿ ಏಕನ್ಯಾಸಧಾರಿಗಳಾದ ಪ.ಪೂ.ಶ್ರೀ. ಯತೀಶ್ವರಾನಂದ ಮಹಾಸ್ವಾಮೀಜಿಯವರನ್ನು, ಕಾರ್ಯಾಧ್ಯಕ್ಷರಾದಂತ ಪ.ಪೂ.ಶ್ರೀ.ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿಯವರನ್ನು ಮನದಲ್ಲಿ ನೆನೆದು ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರೊ. ಡಾ. ಸಿ.ಎಮ್.ತ್ಯಾಗರಾಜ, ಮುಖ್ಯಸ್ಥರು, ಎಂ.ಬಿ.ಎ ಸ್ನಾತಕೋತ್ತರ ವಿಭಾಗ, ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿ, ಪ್ರಾಚಾರ್ಯರಾದ ಡಾ.ಜಿ.ಜಿಕರಲಟ್ಟಿಯವರೇ, ಆಡಳಿತ ಮಂಡಳಿ ಸದಸ್ಯರಾದ ಶ್ರೀಯುತ ಎ.ಎ.ಪಾಟೀಲರೇ, ಗಣ್ಯ ಮಾನ್ಯರೆ, ಪ್ರಾಧ್ಯಾಪಕರೇ, ಆದರ್ಶ ವಿದ್ಯಾರ್ಥಿ ವಿದ್ಯಾರ್ಥಿನಿಯರೇ, ಅಚ್ಚುಮೆಚ್ಚಿನ ವಿದ್ಯಾರ್ಥಿ ವಿದ್ಯಾರ್ಥಿನಿಯರೇ,ನನ್ನ ಪ್ರೀತಿಯ ಸಹೋದ್ಯೋಗಿ ಬಂಧುಗಳೆ, 2018–19ನೆಯ ಶೈಕ್ಷಣಿಕ ಸಾಲಿನ ಸಂಕ್ಷಿಪ್ತ ವರದಿಯನ್ನು ತಮ್ಮ ಮುಂದಿಡಲು ನನಗೆ ಅತೀವ ಸಂತಸವೆನಿಸುತ್ತದೆ.

1967 ರಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಸಮಾನ ಅವಕಾಶಗಳನ್ನು ಪೂರೈಸುವ ಉದ್ದೇಶದಿಂದ ವೇದಾಂತ ಕೇಸರಿ, ಶ್ರೀ.ಮಲ್ಲಿಕಾರ್ಜುನ ಮಹಾಸ್ವಾಮಿಗಳ ಪ್ರೇರಣೆ ಮತ್ತು ಆಶೀರ್ವಾದದಿಂದ ಪ್ರಾರಂಭವಾದ ಈ ಜ್ಞಾನಸೌಧವು ಐವತ್ತೆರಡು ವಸಂತಗಳನ್ನು ಪೂರ್ಣಗೊಳಿಸಿದೆ. ಇಂದು ಹೆಮ್ಮರವಾಗಿ ಬೆಳೆದ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪರೀಕ್ಷಾ ಪರಿಣಾಮಗಳು :

ನಮ್ಮ ಮಹಾವಿದ್ಯಾಲಯದಲ್ಲಿ ನಿರಂತರವಾಗಿ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳು ಮತ್ತು ಒಳ್ಳೆಯ ಗುಣಮಟ್ಟದ ಬೋಧನೆ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳ ಸಾಧನೆ ಉನ್ನತ ಮಟ್ಟಕ್ಕೇರಿದೆ. ಕಳೆದ ವರ್ಷದಲ್ಲಿ 2018ರಲ್ಲಿ ನಡೆದ ಪರೀಕ್ಷೆಯಲ್ಲಿ ಕಲಾ ವಿಭಾಗ 03ರಲ್ಲಿ 92%, ವಾಣಿಜ್ಯ ವಿಭಾಗದಲ್ಲಿ 86.58% ಮತ್ತು ವಿಜ್ಞಾನ ವಿಭಾಗದಲ್ಲಿ 70% ಮತ್ತು ಬಿ.ಬಿ.ಎ ವಿಭಾಗದಲ್ಲಿ 83.33% ಫಲಿತಾಂಶ ಬಂದಿರುತ್ತದೆ. ಮಹಾವಿದ್ಯಾಲಯದ ಆಡಳಿತ ಮಂಡಳಿ ಕೊಡಮಾಡುವ ಚಿನ್ನದ ಪದಕವನ್ನು ಕಲಾ ವಿಭಾಗದ ಮಿಸ್. ಸರೋಜನಿ ದೇವಮೋರೆ (85.46%), ಮಿಸ್. ಉಷಾ ಪಿ ಮಾನೆ (85.29%), ವಾಣಿಜ್ಯ ವಿಭಾಗದ ಮಿಸ್. ವಾಣಿಶ್ರೀ ಪಾಟೀಲ (90.49%), ಮಿಸ್. ಪದ್ಮಜಾ ಕಿನಂಗೆ (88.78%), ಮಿಸ್. ಶುಭಾಂಗಿ ಎ ಮಾನೆ (85.81%), ಮಿಸ್. ಪ್ರೀತಿ ಬಿ. ಜಾರೆ (85.57%), ಮಿಸ್. ದೀಪಾಲಿ ಜೆ ಖರಾಡೆ (85.11%) ಸಾಧನೆ ಮಾಡಿ ಮಹಾವಿದ್ಯಾಲಯದ ಕೀರ್ತಿ ಹೆಚ್ಚಿಸಿದ್ದಾರೆ. ಆಡಳಿತ ಮಂಡಳಿಯವರು ಪ್ರತಿಭಾವಂತ ಮಕ್ಕಳಿಗೆ ಇಟ್ಟಂತಹ ನಗದು ಬಹುಮಾನ ರೂ. 1000ನ್ನು ಬಿ.ಎದಲ್ಲಿ 15 ಬಿ.ಕಾಂದಲ್ಲಿ 04, ಬಿ.ಎಸ್ಸಿ 1 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ.

ಬಿ.ಎ ಮತ್ತು ಬಿ.ಕಾಂ ಪರೀಕ್ಷೆಗಳಲ್ಲಿ ನೂರಕ್ಕೆ ನೂರು ಅಂಕಗಳಿಸಿದವರು ಬಿ.ಕಾಂ 5ನೇ ಸೆಮಿಸ್ಟರ್ ಕು. ವಿದ್ಯಾ ಅಕಿವಾಟೆ– ಕಾಸ್ಟಿಂಗ್ ಅಕೌಂಟ್‌ನಲ್ಲಿ, ಕು. ಅಪ್ಸಾನಾ ದಶವಂತ–ಮ್ಯಾನೇಜಮೆಂಟ್ ಅಕೌಂಟ್‌ನಲ್ಲಿ, 1 ನೇ ಸೆಮಿಸ್ಟರ್ ಕು. ಮುಸ್ಕಾನ ಝಾರೆ – ಫೈನಾನ್ಸಿಯಲ್ ಅಕೌಂಟಿಗ್‌ನಲ್ಲಿ ಬಿ.ಎ 5 ನೇ ಸೆಮಿಸ್ಟರ್‌ದಲ್ಲಿ ಕು. ಕರುಣಾ ಕೊರೆ– ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಇವರ ಸಾಧನೆಗೆ ಅಭಿಮಾನ ಪೂರ್ವಕ ಅಭಿನಂದನೆಗಳು. 2015–16ನೆಯ ಸಾಲಿನಲ್ಲಿ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದು ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲಾಗಿದೆ. ಈಗ 105 ವಿದ್ಯಾರ್ಥಿಗಳನ್ನು ಹೊಂದಿ ಉತ್ತಮ ಪ್ರಗತಿ ಮಾಡಿದೆ.

2018–19ನೇ ಸಾಲಿನ ಆಂತರಿಕ ಪರೀಕ್ಷೆಗಳನ್ನು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ನಿಗದಿ ಪಡಿಸಿದ ಸಮಯದಲ್ಲಿ ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಡಾ. ಎಂ.ವಾಯ್. ಬೋಸಲೆಯವರು ಕಾರ್ಯ ಚೇರಮನ್‌ರಾಗಿ ನಿರ್ವಹಿಸಿದ್ದಾರೆ.

ಪ್ರಾಧ್ಯಾಪಕರಿಂದ ಸಂತ್ರಸ್ತರ ನಿಧಿ ಸಂಗ್ರಹ :

- 20/08/2018ರಂದು ಮಹಾವಿದ್ಯಾಲಯದ ಎಲ್ಲ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇರಿ ಒಟ್ಟು ರೂ. 1,35,097.00ನ್ನು ಕೇರಳಾ ಸಂತ್ರಸ್ತರ ನಿಧಿಗೆ, ರಾಜ್ಯದ ಕೊಡಗಿನಲ್ಲಾದ ಪ್ರಾಕೃತಿಕ ವಿಕೋಪದಿಂದ ಹಾನಿಗೊಳಗಾದ

Dr. S. O. Halasagi
I/c. PRINCIPAL,
Shivanand College,
Kagwad, Dist.

Scanned by CamScanner

ಸಂತ್ರಸ್ತರಿಗೆ ಮಹಾವಿದ್ಯಾಲಯದಿಂದ ರೂ. 72,374.00/- ಗಳನ್ನು ನಮ್ಮ ಗುರುದೇವಾಶ್ರಮದ ಗುರು ಸ್ಮರಣೋತ್ಸವಕ್ಕೆ ಮಹಾವಿದ್ಯಾಲಯದಿಂದ ರೂ. 80,000.00 ಗಳನ್ನು ಮತ್ತು ಸಂತೂಬಾಯಿ ಜಾತ್ರೆ ಮಹೋತ್ಸವಕ್ಕೆ ರೂ. 4500.00ಗಳನ್ನು ನೀಡಲಾಯಿತು.

ಆಂತರಿಕ ಗುಣಮಟ್ಟ ಭರವಸೆಯ ಘಟಕ (IQAC) :

ಮಹಾವಿದ್ಯಾಲಯದಲ್ಲಿ IQAC ಘಟಕವು ಸಕ್ರೀಯವಾಗಿದ್ದು ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಪ್ರಚಲಿತ ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಭರವಸೆ ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ 16/10/2018ರಂದು ಆಯೋಜಿಸಲಾಗಿತ್ತು.
2. ಮಹಾವಿದ್ಯಾಲಯದ ಪ್ರಾಧ್ಯಾಪಕರಿಗಾಗಿ ದಿನಾಂಕ 25/03/2019ರಂದು ಒಂದು ದಿನದ ರಾಜ್ಯ ಮಟ್ಟದ ಓರಿಯಂಟೇಶನ ಕಾರ್ಯಕ್ರಮವನ್ನು "ನ್ಯಾಕ್ ಹೊಸ ಆಯಾಮಗಳು" ಎಂಬ ವಿಷಯದ ಮೇಲೆ ಹಮ್ಮಿಕೊಳ್ಳಲಾಗಿತ್ತು. ಡಾ. ಎಂ.ಬಿ.ಹೋಥಳಿ, ಪ್ರಾಚಾರ್ಯರು ಜಿ.ಆಯ್ ಬಾಗೇವಾಡಿ ಕಾಲೇಜು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದರು.
3. ದಿನಾಂಕ 25/03/2019ರಂದು ಮಹಾವಿದ್ಯಾಲಯದ ಪ್ರಾಧ್ಯಾಪಕರಿಗಾಗಿ ಒಂದು ದಿನದ **"Faculty Development"** ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.
4. ಸಮಾಜ ವಿಜ್ಞಾನ ಸಂಘ ವಿಭಾಗವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಾಗಿ ವಿದ್ಯಾರ್ಥಿಗಳನ್ನು ಅಣಿಗೊಳಿಸುವದು" ಕುರಿತು ಒಂದು ದಿನದ ಕಾರ್ಯಗಾರವನ್ನು ದಿನಾಂಕ 02/04/2019ರಂದು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ IAS/KAS ತರಬೇತಿ ಸಂಸ್ಥೆ ಧಾರವಾಡದ – ಶ್ರೀ. ಸಂಜಯ ಪಾಟೀಲ, ಶ್ರೀ ಕೊಡಬಾಗಿ ಮತ್ತು ಶ್ರೀ ಯಲ್ಲಟ್ಟಿ ವಕೀಲರು ಆಗಮಿಸಿದ್ದರು.

ಕಾಲೇಜು ಒಕ್ಕೂಟ ಹಾಗೂ ಕರ್ನಾಟಕ ಸಾಂಸ್ಕೃತಿಕ ಸಂಘ : ಇವುಗಳ ಕಾರ್ಯಚಟುವಟಿಕೆಗಳನ್ನು 10/08/2018ರಂದು ಉದ್ಘಾಟಿಸಲಾಯಿತು. ಮುಖ್ಯಅತಿಥಿಗಳಾಗಿ ಕೆಎಲ್ಇ ಸಂಸ್ಥೆಯ ಪ್ರೊ. ಜಿ.ಎ.ಮಠಪತಿಯವರು ಆಗಮಿಸಿದ್ದರು. ವರ್ಷದುದ್ದಕ್ಕೂ ಅನೇಕ ಉಪನ್ಯಾಸ ತರಬೇತಿ ಮತ್ತು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರ್ತಿಸಲು ನೃತ್ಯ, ಹಾಡು, ಚರ್ಚೆ, ರಂಗೋಲಿ, ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಪ್ರೊ.ಎಸ್.ಎಸ್.ಬಾಗನೆಯವರು ಚೇರಮನರಾಗಿ ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕ್ವಿಜ್ ವಿಭಾಗ /ರಸಪ್ರಶ್ನೆ : ಪ್ರತಿ ವರ್ಷದಂತೆ ಈ ವರ್ಷವು ಮಹಾವಿದ್ಯಾಲಯದಲ್ಲಿ ವಾರ್ಷಿಕ ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ರಾಜ್ಯಮಟ್ಟದ ಮತ್ತು ಬೇರೆ ಬೇರೆ ಮಹಾವಿದ್ಯಾಲಯಗಳಲ್ಲಿ ಆಯೋಜಿಸಿದ ರಸಪ್ರಶ್ನೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿದ್ದಾರೆ.

ವಿದ್ಯಾರ್ಥಿ ಕಲ್ಯಾಣ ವಿಭಾಗ : ಮಹಾವಿದ್ಯಾಲಯಲದಲ್ಲಿ ವಿದ್ಯಾರ್ಥಿ ಮರ್ಗದರ್ಶನ ಸಮಿತಿಯ ಮಕ್ಕಳ ಸರ್ವತೋಮುಖ ವಿಕಾಸಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ 19/07/2019ರಂದು ಪದವಿ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ದಿನಾಂಕ 28/08/2019ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 78 ವಿದ್ಯಾರ್ಥಿಗಳು ಪ್ರತಿಭೆಗೆ ಪುರಸ್ಕಾರ ನೀಡಲಾಯಿತು.

ವಿದ್ಯಾರ್ಥಿನಿಯರ ಸಂಘ :

* ದಿನಾಂಕ : 11/01/2019ರಂದು ಮಹಿಳಾ ಸಬಲೀಕರಣ ಹಾಗೂ ಜಾನಪದ ವೈವಿಧ್ಯ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಡಾ. ವಾಯ್.ವಾಯ್ ಕೊಕ್ಕನ್ನವರ ಆಗಮಿಸಿದ್ದರು.

* ದಿನಾಂಕ : 02/02/2019ರಂದು ಸಾನೆಹಳ್ಳಿಯ ಶಿವಸಂಚಾರ ತಂಡದಿಂದ "ಪಾಪು ಬಾಪು ಆದದ್ದು" ಎಂಬ ನಾಟಕವನ್ನು ಪ್ರದರ್ಶಿಸಲಾಯಿತು.

* ಡಾ.ಡಿ.ಡಿ.ನಗರಕರವರ ನೇತ್ರತ್ವದಲ್ಲಿ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳಿಗೆ 'ದೇಶಿ ಅಡುಗೆ ದೇಶಿ ಉಡುಗೆ' ಬಗ್ಗೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು.

ಎನ್. ಸಿ. ಸಿ : ಶಿವಾನಂದ ಮಹಾವಿದ್ಯಾಲಯದ ಎನ್.ಸಿ.ಸಿ ಘಟಕವು ಶಿಸ್ತು, ಸಂಯಮ, ಮತ್ತು ದಕ್ಷತೆಗೆ ಹೆಸರುವಾಸಿಯಾಗಿದೆ. ಎನ್.ಸಿ.ಸಿ.ಯಲ್ಲಿ 108 ಕೆಡೆಟ್ ಗಳಿದ್ದು ಇದು ಸೈನ್ಯ ತರಬೇತಿ, ರಕ್ತದಾನ, ನೇತ್ರದಾನ, ಅಂತರಾಷ್ಟ್ರೀಯ ಯೋಗಾಚರಣೆ, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ. ಈ ವರ್ಷ 07 ಕೆಡೆಟ್‌ಗಳು ಸೈನ್ಯದಲ್ಲಿ ಭರ್ತಿಯಾಗಿ ದೇಶ ಸೇವೆ ಮಾಡಲು ಸಿದ್ಧರಾಗಿದ್ದಾರೆ.

Dr. S. O. Halasagi
I/c. PRINCIPAL,
Shivanand College,
Kagwad, Dist. Belagavi

Scanned by CamScanner

ದಿನಾಂಕ : 03/08/2018 – 12/08/2018ರ ವರೆಗೆ ಬೆಳಗಾವಿಯಲ್ಲಿ ಆಯೋಜಿಸಿದ ಸಿಎಟಿಸಿ ಕ್ಯಾಂಪನಲ್ಲಿ 39 ವಿದ್ಯಾರ್ಥಿಗಳು ತರಬೇತಿಯಲ್ಲಿ ಭಾಗವಹಿಸಿದ್ದರು. ಇಲ್ಲಿ ಬೇರೆ ಬೇರೆ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿ ಚ್ಯಾಂಪಿಯನ್ನರಾಗಿದ್ದಾರೆ. ಈ ಸಂದರ್ಭದಲ್ಲಿ ಮೇಜರ್ ವ್ಹಿಎಸ್.ಹುಗಲೆಟ್ಟಿಯವರು Camp Adjutant ರಾಗಿ ಕಾರ್ಯನಿರ್ವಹಿಸಿದ್ದಾರೆ. ಕು. ಜೀವಾಶ್ರೀ ಗಣಿ Tsc ಕ್ಯಾಂಪನಲ್ಲಿ ಭಾಗವಹಿಸಿ ತರಬೇತಿ ಪಡೆದು ದಿಲ್ಲಿಯಲ್ಲಿ ನಡೆದ ತಳಸೇನಾ ಕ್ಯಾಂಪ್‌ಗೆ ಆಯ್ಕೆ ಯಾಗಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಇವರ ಸಾಧನೆಯನ್ನು ಮೆಚ್ಚಿ ಉಪ ಮಹಾನಿರ್ದೇಶಕರು, ಕರ್ನಾಟಕ ಮತ್ತು ಗೋವಾ ಇವರು ಪ್ರಶಂಸನಾ ಪತ್ರ ಪದಕವನ್ನು ನೀಡಿ ಗೌರವಿಸಿದ್ದಾರೆ. ಈ ವರ್ಷ B ಪರೀಕ್ಷೆಯಲ್ಲಿ 39 C ಪರೀಕ್ಷೆಯಲ್ಲಿ 8 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಹೀಗೆ ಎನ್.ಸಿ.ಸಿ. ಯ ವಿದ್ಯಾರ್ಥಿಗಳ ಬಹುಮುಖ ಪ್ರತಿಭೆಗೆ ಸಹಾಯಕವಾಗಿದೆ.

* ಸಮುದಾಯ ಆರೋಗ್ಯ ಕೇಂದ್ರ ಕಾಗವಾಡದಲ್ಲಿ ರಕ್ತದಾನ ಮತ್ತು ನೇತ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ 100 ವಿದ್ಯಾರ್ಥಿಗಳು ನೇತ್ರದಾನದ ಪ್ರತಿಜ್ಞೆಯನ್ನು ಸ್ವೀಕರಿಸಿದ್ದಾರೆ. (Eye Donation Pledge)

* 72 ನೇ ಸ್ವಾತಂತ್ರ್ಯೋತ್ಸವನ್ನು ಮಹಾವಿದ್ಯಾಲಯದಲ್ಲಿ ವಿಜೃಂಭನೆಯಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ. ಕೂಡಲಗಿ, ತಹಶೀಲ್ದಾರ ಕಾಗವಾಡ ಮತ್ತು ಶ್ರೀ. ಶ್ರೀಮಂತ ಪಾಟೀಲ ಎಂ.ಎಲ್.ಎ. ಹಾಗೂ ಗಣ್ಯರು ಪಾಲ್ಗೊಂಡಿದ್ದರು. ಎನ್.ಸಿ.ಸಿ., ಎನ್.ಎಸ್.ಎಸ್. ಸ್ಕೌಟ್ಸ್ ಮತ್ತು ಗೈಡ್ಸ್ ಪೋಲಿಸ ಸ್ಟಾಫ್ ಪರೇಡ್ ವಂದನೆಯಲ್ಲಿ ಭಾಗಿಯಾಗಿದ್ದರು. ಮತ್ತು ನಂತರ ಆಕರ್ಷಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

* 26 ಜನೇವರಿ 2019 ರಂದು ಗಣರಾಜ್ಯೋತ್ಸವ ಆಚರಿಸಲಾಯಿತು. ಸಾರ್ವಜನಿಕ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ದೇಶಪಾಂಡೆ ತಹಶೀಲ್ದಾರ ಮತ್ತು ಎಂ.ಎಲ್.ಎ. ಶ್ರೀಮಂತ ಪಾಟೀಲ, ಪ್ರಾಚಾರ್ಯರು, ಪರಮ ಪೂಜ್ಯರು ನೇರವೇರಿಸಿದರು.

* **08/04/2019ರಂದು** ಚುನಾವಣಾ ಅಧಿಕಾರಿಗಳಿಂದ ಎನ್.ಸಿ.ಸಿ, ಎನ್.ಎಸ್.ಎಸ್. ಮತ್ತು ಹಲವಾರು ವಿಭಾಗದ ವಿದ್ಯಾರ್ಥಿಗಳಿಂದ ಮತದಾನ ಜಾಗ್ರತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಎನ್.ಎಸ್.ಎಸ್ : ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕದ ಕಾರ್ಯ ಚಟುವಟಿಕೆಗಳ ಉದ್ಘಾಟನೆ **02/08/2018** ವಿಶ್ರಾಂತ ಪ್ರಾ. ಎಸ್.ಬಿ.ಪಾಟೀಲರಿಂದ ನೇರವೇರಿತು. ಅಧ್ಯಕ್ಷತೆಯನ್ನು ಡಾ.ಜಿ.ಜಿ.ಕರಲಟ್ಟಿಯವರು ವಹಿಸಿದ್ದರು. ಎನ್.ಎಸ್.ಎಸ್. ಘಟಕದ ಅಡಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಮತ್ತು ಲಾಲ ಬಹದ್ದೂರ ಜಯಂತಿ, ಕನಕ ದಾಸ , ವಾಲ್ಮೀಕಿ, ಡಾ.ಅಂಬೇಡಕರ, ಬಸವ, ಶಿವಾಜಿ, ಸದ್ಭಾವನಾ ದಿನ, ವನ ಮಹೋತ್ಸವ ಆಚರಣೆ ಮುಂತಾದ ವಿಡಾಯಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಯಿತು.

* "ಸ್ವಚ್ಛತಾ ಹೀ ಸೇವಾ" ಎಂಬ ಘೋಷ ವಾಕ್ಯದ ಅಡಿಯಲ್ಲಿ ಸ್ವಚ್ಛತೆಯ ಕುರಿತು ಜಾಗ್ರತಿ ಮೂಡಿಸಲಾಯಿತು.

* **ದಿನಾಂಕ : 24/09/2018** ರಂದು ಎನ್.ಎಸ್.ಎಸ್. ದ ದಿನಾಚರಣೆಯನ್ನು ಆಚರಿಸಲಾಗಿತ್ತು.

* **ದಿನಾಂಕ : 28/09/2018** ಕಾಗವಾಡದ ಆರೋಗ್ಯ ಸಮುದಾಯ ಕೇಂದ್ರದಲ್ಲಿ ಎನ್.ಎಸ್.ಎಸ್. ಮತ್ತು ಯೂಥ್ ರೆಡ್‌ಕ್ರಾಸ್ ಸಂಯುಕ್ತಾಶ್ರಯದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಇದರಲ್ಲಿ 35 ಸ್ವಯಂ ಸೇವಕರು ರಕ್ತದಾನ ಮಾಡಿದರು.

* ಆರೋಗ್ಯ ಕೇಂದ್ರದಲ್ಲಿ ಸ್ವಯಂ ಸೇವಕರ ರಕ್ತ ತಪಾಸಣೆ ನೇತ್ರದಾನ ಕಾರ್ಯಕ್ರಮ ನೇರವೇರಿತು.

* **ದಿನಾಂಕ : 08/02/2019 ರಿಂದ 14/02/2019** ರ ವರೆಗೆ ದತ್ತು ಗ್ರಾಮ ಶೇಡಬಾಳದಲ್ಲಿ 7 ದಿನಗಳ ವಾರ್ಷಿಕ ವಿಶೇಷ ಶಿಬಿರ ಏರ್ಪಡಿಸಲಾಗಿತ್ತು. ಡಾ.ಎಸ್.ಎ.ಕರ್ಕೆ ಹಾಗೂ ಸ್ವ-ಆರ್ಥಿಕ ಘಟಕದ ಅಧಿಕಾರಿ ಪ್ರೊ. ಐ.ಎಸ್.ಜಮಾದಾರ ನೇತೃತ್ವದಲ್ಲಿ ಎನ್.ಎಸ್.ಎಸ್. ಘಟಕವು 150 ಸ್ವಯಂ ಸೇವಕರಿಂದ ವರ್ಷದುದ್ದಕ್ಕೂ ಶ್ರಮದಾನ ಸ್ವಚ್ಛತೆ ಹಾಗೂ ಶುಚಿತ್ವ ಕುರಿತು ಜನರಲ್ಲಿ ಜಾಗೃತಿ ಮೂಡಿಸಿವಲ್ಲಿ ಯಶಸ್ವಿಯಾಗಿದ್ದಾರೆ.

ಕ್ರೀಡಾ ವಿಭಾಗ : "A Sound mind in a Sound body" ಎಂಬ ಉಕ್ತಿಗೆ ಪೂರಕವಾಗಿ ನಮ್ಮ ಮಹಾವಿದ್ಯಾಲಯ ಕ್ರೀಡಾ ವಿಭಾಗ ಕಾರ್ಯಗೈಯ್ಯುತ್ತಿದೆ. 2018– 19ನೇ ಸಾಲಿನ ಕ್ರೀಡಾ ಚಟುವಟಿಕೆಗಳನ್ನು **31/08/2018** ರಂದು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಜಿ.ಜಿ.ಕರಲಟ್ಟಿಯವರು ಉದ್ಘಾಟಿಸಿದರು. ವಿವಿಧ ಕ್ರೀಡೆಗಳಿಗಾಗಿ ವಿದ್ಯಾರ್ಥಿಗಳನ್ನು ಆಯ್ಕೆಮಾಡಲು ಕ್ರೀಡಾ ನಿರ್ದೇಶಕರಾದ ಪ್ರೊ. ಆರ್.ಎಸ್.ನಾಗರಡ್ಡಿಯವರು ತರಬೇತಿ ನೀಡುತ್ತಿದ್ದಾರೆ.

* ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಬೆಳಗಾವಿ, ಮರಾಠಾ ಮಂಡಳ ಕಾಲೇಜು, ಖಾನಾಪೂರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಳಕಲ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪೂರ, ಎಸ್.ವಿ.ಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ ಮೊದಲಾದ ಮಹಾವಿದ್ಯಾಲಯಗಳಲ್ಲಿ ನಡೆದ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ವಿವಿಧ ಕ್ರೀಡೆಗಳ ತಂಡಗಳ ಆಯ್ಕೆಯಲ್ಲಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ.

* **ದಿನಾಂಕ : 26/09/2018 ರಿಂದ 28/09/2018** ನಮ್ಮ ಮಹಾವಿದ್ಯಾಲಯದಲ್ಲಿ ಪುರುಷ ಮತ್ತು ಮಹಿಳೆಯರ ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಅಂತರ್ ಕಾಲೇಜು ಚದುರಂಗ ಪಂದ್ಯಾವಳಿಯನ್ನು ಸಂಘಟಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ ಪುರುಷರ 40 ತಂಡಗಳು ಪಾಲ್ಗೊಂಡು ಮತ್ತು ಮಹಿಳೆಯರ 16 ತಂಡಗಳು ಪಾಲ್ಗೊಂಡಿದ್ದವು. ಈ ಪಂದ್ಯಾವಳಿಯಲ್ಲಿ ನಮ್ಮ

Dr. S. O. Halasagi
I/c. PRINCIPAL,
Shivanand College,
Kagwad, Dist. Belgaum

Scanned by CamScanner

ಮಹಾವಿದ್ಯಾಲಯದ 1) ಜಯಶ್ರೀ ಪೂಜಾರಿ 2) ಸೀಮಾ ಕಳಸದ 3) ಪೂಜಾ ಗಾಡಿವಡ್ಡರ 4) ಅರತಿ ಅಳವಾಡ 5) ಸೃಷ್ಟಿ ಮಡಿವಾಳ 6) ಮೇಘಾ ಜಾಧವ ಮಹಿಳೆಯರ ತಂಡವು ದ್ವಿತೀಯ ಸ್ಥಾನ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

* **ದಿನಾಂಕ 09/10/2018 ರಿಂದ 10/10/2018** ರ ವರೆಗೆ ರಾಣಿ ಚ. ಕಾಲೇಜಿನ ಮಹಾವಿದ್ಯಾಲಯ ಕಂಚಿಯಲ್ಲಿ ಪುರುಷರ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿಯಲ್ಲಿ ನಮ್ಮ ಮಹಾವಿದ್ಯಾಲಯದ ಕು. ಸುಹಾಸಿನಿ ಜೆ. ಮಗದುಮ್ ಪ್ರಥಮ ಬಿ.ಎ ವಿದ್ಯಾರ್ಥಿನಿಯು 75kg ಕುಸ್ತಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ತಂಡಕ್ಕೆ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯ ಕುಸ್ತಿ ಪಂದ್ಯಾವಳಿಯಲ್ಲಿ ಪಾಲ್ಗೊಂಡು ಅಂತರ್ ವಿಶ್ವವಿದ್ಯಾಲಯ ಕೊಲ್ಹಾಪುರ (ಮಹಾರಾಷ್ಟ್ರ)ದಲ್ಲಿ ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾಳೆ.

* **ದಿನಾಂಕ 13/10/2018 ರಿಂದ 14/10/2018** ರ ವರೆಗೆ ನಡೆದ ಎಸ್.ಜಿ.ಪಿ.ಸಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಮುದ್ದೇಬಿಹಾಳದಲ್ಲಿ ಮಹಿಳೆಯರ ಅಂತರ್ ಕಾಲೇಜು ಕುಸ್ತಿ ಪಂದ್ಯಾವಳಿಯಲ್ಲಿ ಕು. ಸುಹಾಸಿನಿ ಜೆ. ಮಗದುಮ್ ನಾಯಕತ್ವದ ತಂಡ ದ್ವಿತೀಯ ಸ್ಥಾನ ಪಡೆದಿದೆ. ಇವರಲ್ಲಿ 1) ಸುಹಾಸಿನಿ ಮಗದುಮ್ ಮತ್ತು 2) ಪ್ರೀತಿ ಚಾಂದಸಿ ಆಯ್ಕೆಯಾಗಿ ಅಂತರ್ ವಿಶ್ವವಿದ್ಯಾಲಯಗಳ ಕುಸ್ತಿ ಪಂದ್ಯಾವಳಿಯು ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರುನಲ್ಲಿ ಪಾಲ್ಗೊಂಡು ಉತ್ತಮ ಸಾಧನೆ ಮಾಡಿ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

* **ದಿನಾಂಕ 22/12/2018 ರಿಂದ 23/12/2018** ರ ವರೆಗೆ ಸಿಕ್ಯಾಬ್ ಬಿಬಿಎ ಮತ್ತು ಬಿ.ಎಸ್ಸಿ ಮಹಾವಿದ್ಯಾಲಯ ವಿಜಯಪುರದಲ್ಲಿ ನಡೆದ ಮಹಿಳೆಯರ ಅಂತರ್ ಕಾಲೇಜು ಬಾಲ್ ಬ್ಯಾಡ್‌ಮಿಂಟನ್ ಪಂದ್ಯಾವಳಿಯಲ್ಲಿ ಕು. ಸೋನಾಲಿ ಎಸ್. ಪೂಜಾರಿ ನಾಯಕತ್ವದಲ್ಲಿ 10 ಜನ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು ಅವರಲ್ಲಿ ಕು. ಸೋನಾಲಿ ಎಸ್. ಪೂಜಾರಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ತಂಡದ ಬಾಲ್ ಬ್ಯಾಡ್‌ಮಿಂಟನ್ ತಂಡಕ್ಕೆ ಆಯ್ಕೆ ಆಗಿ ಕೃಷ್ಣಾ ವಿಶ್ವವಿದ್ಯಾಲಯ ಕುಪ್ಪಮ್ (ಆಂಧ್ರ ಪ್ರದೇಶ)ನಲ್ಲಿ ಪಾಲ್ಗೊಂಡು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

* **ದಿನಾಂಕ : 22/11/2018 ರಿಂದ 24/11/2018** ರ ವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳಗಿಯಲ್ಲಿ ನಡೆದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯ ಅಥ್ಲೇಟಿಕ್ ಮೀಟ್ ದಲ್ಲಿ ಕು. ಸುಹಾಸಿನಿ ಮಗದುಮ್ ನಾಯಕತ್ವದ ತಂಡ ಪಾಲ್ಗೊಂಡಿತ್ತು. ಇದರಲ್ಲಿ ಕು. ಸುಹಾಸಿನಿ ಮಗದುಮ ಚಕ್ರ ಎಸೆತದಲ್ಲಿ ರಾ.ಚ.ವಿ.ತಂಡದ ಹೊಸ ದಾಖಲೆಯನ್ನು ಬರೆದು ರಾ.ಚ.ವಿ.ತಂಡಕ್ಕೆ ಆಯ್ಕೆಯಾಗಿ ಮಂಗಳೂರು ವಿಶ್ವವಿದ್ಯಾಲಯದ ಆಳ್ವಾಸ್‌ದಲ್ಲಿ ನಡೆದ ಅಂತರ ವಿಶ್ವವಿದ್ಯಾಲಯ ಅಥ್ಲೇಟಿಕ್ ಮೀಟ್ ದಲ್ಲಿ ಭಾಗವಹಿಸಿದ್ದಾಳೆ.

<u>ಯುಥ್ ರೆಡ್ ಕ್ರಾಸ್ ಘಟಕ :</u> ಸರಕಾರಿ ಆದೇಶದಂತೆ ಮಹಾವಿದ್ಯಾಲಯದಲ್ಲಿ ರೆಡ್ ಕ್ರಾಸ್ ಘಟಕ ಸ್ಥಾಪಸಿಗೊಂಡಿದ್ದು ವಿದ್ಯಾರ್ಥಿಗಳಿಗಾಗಿ, ಜನಸಾಮಾನ್ಯರಿಗಾಗಿ, ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರೊ. ಬಿ.ಡಿ.ಧಾಮಣ್ಣವರ ಘಟಕದ ಅಧಿಕಾರಿಗಳಾಗಿದ್ದು, ತರಬೇತಿ, ರಕ್ತದಾನ ಮತ್ತು ಬೇರೆ ಬೇರೆ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.

<u>ಸಂಶೋಧನಾ ಘಟಕ :</u> ದಿನಾಂಕ 10/04/2019ರಂದು 'ಸಂಶೋಧನೆ' ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಡಾ. ಜಯಶ್ರೀ ನಾಗರಳ್ಳಿ, ಶ್ರೀಮತಿ ಎ.ಎ. ಪಾಟೀಲ ಮಹಿಳಾ ಮಹಾವಿದ್ಯಾಲಯ, ಚಿಕ್ಕೋಡಿ ಇವರು ಸಂಶೋಧನೆ ಬಗ್ಗೆ ಉಪನ್ಯಾಸ ನೀಡಿದರು. ಹಾಗೂ ಡಾ.ಎಸ್.ಓ.ಹಲಸಗಿ 'ಸಂಶೋಧನೆ'ಯ ವಿಷಯ ಕುರಿತು ಮಂಡನೆ ಮಾಡಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ.ಜಿ.ಜಿ.ಕರಲಟ್ಟಿಯವರು ವಹಿಸಿದರು. ಡಾ.ಎಸ್.ಪಿ.ತಳವಾರರು ಘಟಕವನ್ನು ನಿರ್ವಹಿಸುತ್ತಿದ್ದಾರೆ.

<u>ಸಮಾಜ ವಿಜ್ಞಾನ ಸಂಘ :</u> ದಿನಾಂಕ 19/02/2019ರಂದು ಸಮಾಜ ವಿಜ್ಞಾನಗಳ ಸಂಘವು ಸ್ಥಾಪನೆಯಾಯಿತು. ವಿದ್ಯಾರ್ಥಿಗಳಿಗಾಗಿ ಒಂದು ದಿನದ ರಾಜ್ಯಮಟ್ಟದ ಕಾರ್ಯಗಾರವನ್ನು **02/04/2019ರಂದು** ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಧಾರವಾಡದ ಕ್ಲಾಸಿಕ್ ಸ್ಟಡಿ ಸರ್ಕಲ್‌ನ ಸತೀಶ್ ಬೆನಕಟ್ಟಿ, ಸಂಜಯ ಪಾಟೀಲ ಮತ್ತು ಕೊಟಬಾಗಿ ಆಗಮಿಸಿದ್ದರು. ಕಾರ್ಯಕ್ರಮದ ಅತಿಥಿಗಳಾಗಿ ವಕೀಲರಾದ ಯಲ್ಲಟ್ಟಿಯವರು ಭಾಗವಹಿಸಿದ್ದರು.

ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಶಿಕ್ಷಣಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ವಿಭಾಗಗಗಳು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು.

ನಮ್ಮ ಮಹಾವಿದ್ಯಾಲಯದಲ್ಲಿ ಎಸ್‌ಸಿ/ಎಸ್‌ಟಿ ಸೆಲ್, ಸ್ಕೌಟ್ಸ ಮತ್ತು ಗೈಡ್ಸ್, ದೂರ ಶಿಕ್ಷಣ, ಅಧ್ಯಯನ ಕೇಂದ್ರ, ವಿದ್ಯಾರ್ಥಿಗಳ ಕುಂದುಕೊರೆಗಳ ಘಟಕ, ಇನ್ನಿತರ ಘಟಕಗಳು ಸಕ್ರೀಯವಾಗಿ ಕಾರ್ಯ ನಿರ್ವಹಿಸುತ್ತಿವೆ.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

ವಾಣಿಜ್ಯಶಾಸ್ತ್ರ ವಿಭಾಗ : ವಾಣಿಜ್ಯ ಸಂಘದ ಸಂಕ್ಷಿಪ್ತ ವರದಿ.

* ಪ್ರೊ ಎಸ್.ಬಿ.ಆಕಾಶ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇವರಿಂದ ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಗಳು ಎಲ್ಲ ಚಟುವಟಿಕೆಗಳನ್ನು ಆಯೋಜಿಸಲು 'ವಾಣಿಜ್ಯ ಸಂಘ' ಸ್ಥಾಪನೆಯ ಮೂಲಕ ವೇದಿಕೆಯನ್ನು ನಿರ್ಮಿಸಲಾಯಿತು.

* ಇದರಡಿಯಲ್ಲಿ ಎಲ್‌ಪಿ ಕಂಪನಿಯ ಶ್ರೀ ಶಿವಾನಂದ ಪಿ ನಾಯಿಕ ಇವರಿಂದ ಉಪನ್ಯಾಸ , ಕೊಲ್ಹಾಪೂರದ ಕಂಪನಿ ಸೆಕ್ರೆಟರಿ ಸಂಸ್ಥೆಯ ಘಟಕದವರಿಂದ ಮಾರ್ಗದರ್ಶನ, ಸಿಬ್ಬಂದಿ ವಿನಿಮಯ ಯೋಜನೆಯಲ್ಲಿ ಪ್ರೊ. ಸುಪ್ರಿಯಾ ಅರಬೋಲೆ ಮತ್ತು ಪ್ರೊ. ಎಂ.ಸಿ. ಬಕನೆತ್ತಿ ಇವರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಮತ್ತು ದಸರಾ ನಿಮಿತ್ತ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

* ಬಿ.ಕಾಂ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸ್ನೇಹ ಸಮ್ಮಿಲನದ ಜನರಲ್ ಚಾಂಪಿಯನ್ಸ್, ಮ್ಯಾನೇಜಮೆಂಟ್ ಫೆಸ್ಟ್ ಆರಂಭ-2019ರಲ್ಲಿ ಬಹುಮಾನ, ರಾ.ಚ.ವಿ.ವಿ ಯ ಚನ್ನಮ್ಮ ಯುವ ಸಂಭ್ರಮದಲ್ಲಿ 06 ಸ್ಪರ್ಧೆಗಳಲ್ಲಿ ಬಹುಮಾನ, ಅಂತರ್-ಕಾಲೇಜು ಕಾಮರ್ಸ ಕ್ವೀಜ್‌ದಲ್ಲಿ ಬಹುಮಾನ, ಚರ್ಚಾ ಸ್ಪರ್ಧೆಯಲ್ಲಿ ಬಹುಮಾನ, ಚಕ್ರವರ್ತಿ ಮ್ಯಾನೇಜಮೆಂಟ್ ಫೆಸ್ಟ್‌ದಲ್ಲಿ ವಿಜಯ ಸಾಧಿಸಿದ್ದಾರೆ.

* ಬಿ.ಕಾಂ ವಿದ್ಯಾರ್ಥಿಗಳಲ್ಲಿ ಎನ್.ಸಿ.ಸಿ ಮೂಲಕ ಭಾರತೀಯ ಸೇನಾ ಕ್ಯಾಂಪ್‌ದಲ್ಲಿ ಫೈರಿಂಗ್‌ದಲ್ಲಿ ರಾಷ್ಟ್ರ ಮಟ್ಟದ ಪ್ರಶಸ್ತಿ ಮತ್ತು ರಾ.ಚ.ವಿ.ವಿಯ ಖೋ-ಖೋದಲ್ಲಿ ಯುನಿವರ್ಸಿಟಿ ಬ್ಲೂ ಹಾಗೂ ಇತರ ಆಟಗಳಲ್ಲಿ ಭಾಗವಹಿಸಿ ಕೀರ್ತಿ ತಂದಿದ್ದಾರೆ.

* ಬಿ.ಕಾಂ – 1ನೇ ಸೆಮ್ ಫೈನಾನ್ಸಿಯಲ್ ಅಕೌಂಟಿಂಗ್‌ದಲ್ಲಿ, ಮತ್ತು ಬಿ.ಕಾಂ 5ನೇ ಸೆಮ್‌ದ ಎಲೆಮೆಂಟ್ಸ್ ಆಫ್ ಕಾಸ್ಟಿಂಗ್ ಮತ್ತು ಮ್ಯಾನೇಜಮೆಂಟ್ ಅಕೌಂಟಿಂಗ್ ವಿಷಯಗಳಲ್ಲಿ ಮೂರು ವಿದ್ಯಾರ್ಥಿನಿಯರು ನೂರಕ್ಕೆ ನೂರು ಅಂಕಗಳಿಸಿ ಕೀರ್ತಿ ತಂದಿದ್ದಾರೆ.

* ಫೆಬ್ರುವರಿ 27 ರಂದು ಅಭೂತಪೂರ್ವವೆನಿಸಿದ 'ಫಾವರ್ ಆಫ್ ಫಿಫ್ಟಿ' ಹೆಸರಿನಿಂದ ವಾಣಿಜ್ಯ ಹಬ್ಬವನ್ನು ವಿದ್ಯಾರ್ಥಿಗಳೇ ಆಯೋಜಿಸಿ, ಕರ್ನಾಟಕ ಮಹಾರಾಷ್ಟ್ರಗಳಿಂದ ಅಂದಾಜು 35 ಕಾಲೇಜಿನ 400 ಸ್ಪರ್ಧಿಗಳು ಭಾಗವಹಿಸುವಲ್ಲಿ ಯಶಸ್ವಿಯಾಗಿ, ಒಟ್ಟು **40,000.00** ಮೌಲ್ಯದ ಬಹುಮಾನಗಳನ್ನು ಪ್ರಾಯೋಜಿಸಿದ್ದರು.

* ಇದರಿಂದ ಉಳಿತಾಯದಲ್ಲಿ **ರೂ. 60,000.00** ಫಿಕ್ಸ್ಡ್ ಡಿಪಾಸಿಟ್ ಮಾಡಿದ್ದು, ಪ್ರತಿ ವರ್ಷ ಬಿ.ಕಾಂ-1, 2 ಮತ್ತು 3ರ ಗರಿಷ್ಠ ಅಂಕಗಳಿಸುವ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನಿರ್ಣಯಿಸಲಾಯಿತು.

* ಉನ್ನತ ಶಿಕ್ಷಣಕ್ಕಾಗಿ ಎಂ.ಬಿ.ಎ ಕುರಿತು ಸಮಾಲೋಚನೆ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

* ವಿಭಾಗದ ಡಾ. ಜಿ.ಜಿ. ಕರಲಟ್ಟಿ ಮತ್ತು ಡಾ. ಎಸ್.ಓ. ಹಲಸಗಿಯವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ, ಪ್ರಬಂಧ ಮಂಡನೆ ಮಾಡಿದ್ದಾರೆ. ಸಂಶೋಧನೆಯಲ್ಲಿಯೂ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ.

* ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳೊಂದಿಗೆ ಪ್ರೊ. ಮಿಸ್. ಅಶ್ವಿನಿ ಸವದತ್ತಿ, ವ್ಹಿ.ಬಿ. ಬುರ್ಲಿ ಮತ್ತು ಎಂ.ಎಸ್. ಕುಂಬಾರ ಅವರು 3 ದಿನಗಳ ಶೈಕ್ಷಣಿಕ ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಂಡಿದ್ದರು. ಕುಮಾರ. ಮಲ್ಲಿನಾಥ್ ಭೋಸಗೆ ವಾಣಿಜ್ಯ ಸಂಘದ ಕಾರ್ಯದರ್ಶಿಯಾಗಿದ್ದರು.

ಹೀಗೆ ವರ್ಷದುದ್ದಕ್ಕೂ ವಿಭಾಗದ ಪ್ರಾಧ್ಯಾಪಕರು ಪ್ರಾಚಾರ್ಯರ ನಿರ್ದೇಶನದ ಮತ್ತು ಪ್ರೇರಣೆಯ ಪ್ರಕಾರ ಕಾರ್ಯಗಳನ್ನು ಯಶಸ್ವಿಗೊಳಿಸಿದರು.

ವಿಜ್ಞಾನ ವಿಭಾಗ :

* **ದಿನಾಂಕ 27/07/2018**ರಂದು ದಿ. ಡಾ. ಅಬ್ದುಲ್ ಕಲಾಂರ ಸಾಧನೆಗಳ ಕುರಿತು ದೃಶ್ಯ ಮಾಧ್ಯಮದ ಮೂಲಕ ತೋರಿಸಿ ಗೌರವ ಸೂಚಿಸಲಾಯಿತು.

* **ದಿನಾಂಕ 21/08/2018ರಂದು** ಪ್ರಥಮ ವರ್ಗದ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು. ಈ ಕಾರ್ಯಕ್ರಮದ ಅತಿಥಿಗಳಾಗಿ ಚಿಕ್ಕೋಡಿಯ ಸರಕಾರಿ ಪದವಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಆರ್.ಪಿ.ಕಾಗೆಯವರು ಆಗಮಿಸಿದ್ದರು.

Dr. S. O. Halasagi
I/c. PRINCIPAL,
Shivanand College,
Ka... Dist. Belagavi.

Scanned by CamScanner

* ದಿನಾಂಕ 08/01/2019 ರಿಂದ 13/01/2019ರವರೆಗೆ ಬೆಂಗಳೂರು, ಮೈಸೂರಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲಾಯಿತು.

* ದಿನಾಂಕ 23/01/2019 ರಂದು ಅಮರ ಸೇನಾನಿ ಸುಭಾಷ ಚಂದ್ರ ಭೋಸರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

* ದಿನಾಂಕ 28/02/2019 ರಂದು ಅರ್ಥಪೂರ್ಣವಾಗಿ 'ವಿಜ್ಞಾನ ದಿನಾಚರಣೆಯನ್ನು' ಆಚರಿಸಲಾಯಿತು. ವಿದ್ಯಾರ್ಥಿಗಳಿಗಾಗಿ 'ವಿಜ್ಞಾನ ಉಪನ್ಯಾಸ' ಮತ್ತು ರಸಪ್ರಶ್ನೆ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಅತಿಥಿಗಳಾದ ಡಾ.ಸಿದಗೌಡಾ ಪಾಟೀಲ ಪ್ರಾಚಾರ್ಯರು ಪ್ಲಿಎಸ್.ಎಮ್ ಮಹಾವಿದ್ಯಾಲಯ ನಿಪ್ಪಾಣಿ ಹಾಗೂ ಬೆಂಗಳೂರಿನ ಬಹುರಾಷ್ಟ್ರೀಯ ಸಂಸ್ಥೆ ಕೆ.ಜೆ.ವಿ ಟೈಬಲ್ ಸೊಸೈಟಿಯ ಅಧ್ಯಕ್ಷರಾದ ಡಾ. ವಾಸಾಕ್ ಭಟ್ಟೆರವರು ಆಗಮಿಸಿದ್ದರು.

* ವಿದ್ಯಾರ್ಥಿಗಳಿಗೆ ಅಮೇರಿಕಾದ 'ಸ್ಕಿಲ್ ಬೀಸ್' ಸಂಸ್ಥೆಯ ಸಹಯೋಗದಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ. ಜೊತೆಗೆ ಪ್ರತಿ ತಿಂಗಳು ಮನೋವೈಜ್ಞಾನಿಕ ಆಪ್ತ ಸಮಾಲೋಚನೆಯನ್ನು ಪ್ರೊ.ಕಿರಣ ದೇಸಾಯಿಯವರು ನಡೆಸುತ್ತಿದ್ದಾರೆ.

* ಈ ವರ್ಷ ನಡೆದ ಕ್ಯಾಂಪಸ್ ಡ್ರೈವ್ ಶಿಬಿರದಲ್ಲಿ ಬೆಂಗಳೂರಿನ ಎಚ್‌ಪಿ ಕಂಪನಿಗೆ ಅಂತಿಮ ವರ್ಷದ ವಿದ್ಯಾರ್ಥಿನಿಯಾದ ರೋಹಿಣಿ ದೊಣವಾಡೆ, ಪ್ರಿಯಾಂಕಾ ಭುವಿ ಆಯ್ಕೆಯಾಗಿದ್ದು ನಮ್ಮ ಹೆಮ್ಮೆಯಾಗಿದೆ.

* ಮಹಾವಿದ್ಯಾಲಯದ ಎಸ್‌ಎಫ್‌ಎಂ ರೇಡಿಯೋ ಸ್ಟೇಷನ್‌ಗಾಗಿ ವಿದ್ಯಾರ್ಥಿಗಳಿಂದ ಧ್ವನಿ ಮುದ್ರಣ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆಸಕ್ತರಿಗೆ ರೇಡಿಯೋ ಪ್ರಸಾರದ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ.

<u>ಶಿವಾನಂದ ಕರಿಯರ್ ಅಕಾಡಮಿ :</u> **ದಿನಾಂಕ 10/10/2018ರಂದು** ನಡೆದ ಕರಿಯರ್ ಅಕಾಡಮಿಯ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭ ನಡೆಯಿತು. ಮುಖ್ಯ ಅತಿಥಿಗಳಾಗಿ ಪ್ರೊ. ಬಿ.ಆರ್.ಮುಗ್ಗನ್ನವರ ಆಗಮಿಸಿದ್ದರು. ವರ್ಷದುದ್ದಕ್ಕೂ ಕೌಶಲ್ಯಗಳ ತರಬೇತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ವಿವಿಧ ತರಬೇತಿಗಳನ್ನು ನಡೆಸಲಾಯಿತು.

<u>ಇತಿಹಾಸ ವಿಭಾಗ ಮತ್ತು ಪರಂಪರೆ ಕೂಟ :</u> ಇತಿಹಾಸ ವಿಭಾಗ ಹಾಗೂ ಪರಂಪರೆ ಕೂಟಗಳ 2018–19ನೇ ಸಾಲಿನ ಕಾರ್ಯಚಟುವಟಿಕೆಗಳನ್ನು ದಿನಾಂಕ : 09–08–2018 ರಂದು ಪ್ರಾಚಾರ್ಯರಾದ ಡಾ. ಜಿ.ಜಿ. ಕರಲಟ್ಟಿಯವರು ಉದ್ಘಾಟಿಸಿ, ನಮ್ಮ ಭವ್ಯ ಪರಂಪರೆ, ಹಬ್ಬಗಳು, ಆಚರಣೆಗಳು ಸಂಸ್ಕೃತಿಯನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ಒಯ್ಯಬೇಕೆಂದು ಹೇಳಿದರು.

* ಇದೇ ಶೈಕ್ಷಣಿಕ ವರ್ಷದ ಡಿಸೆಂಬರ್ ಹಾಗೂ ಫೆಬ್ರುವರಿ ತಿಂಗಳುಗಳಲ್ಲಿ ನಮ್ಮ ಕಾಗವಾಡ ತಾಲೂಕಿನ ಹಾಗೂ ಅಥಣಿ ತಾಲೂಕಿನಲ್ಲಿರುವ ಪ್ರಾಚೀನ, ಐತಿಹಾಸಿಕ ದೇವಾಲಯಗಳಿಗೆ ಪ್ರೊ. ಟಿ.ಆರ್. ದರೇಕರ, ಡಾ. ಎಸ್.ಎ. ಕರ್ಕಿ, ಪ್ರೊ. ಜೆ.ಕೆ. ಪಾಟೀಲ ಮಾರ್ಗದರ್ಶನದಲ್ಲಿ ಭೇಟಿಕೊಟ್ಟು ಸಾಂಸ್ಕೃತಿಕವಾಗಿ ಅವುಗಳ ಮಹತ್ವ, ಅವುಗಳ ರಕ್ಷಣೆ, ಸ್ವಚ್ಛತೆಗಳಬಗ್ಗೆ ತಿಳಿಸಿ ಹೇಳಲಾಯಿತು.

* **ದಿನಾಂಕ : 15–01–2019ರಂದು** ಪಾರಂಪರಿಕ ಹಬ್ಬಗಳ ಆಚರಣೆಯ ಅಂಗವಾಗಿ ದೇಶಿ–ಉಡುಗೆ ತೊಡುಗೆಗಳೊಂದಿಗೆ ವಿಜೃಂಭಣೆಯಿಂದ ಸಾಂಸ್ಕೃತಿಕ ಹಬ್ಬ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ದೇಶಿ ಆಹಾರ ಪದ್ಧತಿಯನ್ನು ಉಳಿಸಿಕೊಂಡು ಹೋಗುವ ಸಲುವಾಗಿ ವಿದ್ಯಾರ್ಥಿಗಳಿಂದ ಪ್ರಾತ್ಯಕ್ಷಿಕೆ ನಡೆಸಲಾಯಿತು.

* **ದಿನಾಂಕ : 12–01–2019ರಂದು** ವಿವೇಕಾನಂದರ ಜಯಂತಿಯನ್ನು ಹಾಗೂ ಯುವ ಸಪ್ತಾಹವನ್ನು ಆಚರಿಸಲಾಯಿತು.

* **ದಿನಾಂಕ : 10–02–2019ರಂದು** 'ಪಾರಂಪರಿಕ ಹಬ್ಬಗಳ ಆಚರಣೆ ಮತ್ತು ಅವುಗಳ ಮಹತ್ವ' ಎಂಬ – ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಉಪನ್ಯಾಸಕರಾಗಿ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಂ.ಬಿ.ಹೂಗಾರರವರು ಮತ್ತು ಶಿವಾನಂದ ಪದವಿ–ಪೂರ್ವ ಮಹಾವಿದ್ಯಾಲಯದ ಇತಿಹಾಸ ಉಪನ್ಯಾಸಕಿ ಶ್ರೀಮತಿ. ಜಾನಕಿ ನಾಯ್ಕರವರು 'ಪ್ರಾಚೀನ ಹಬ್ಬಗಳ ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪ ಪ್ರಾಚಾರ್ಯ ಡಾ.ಎಸ್.ಓ.ಹಲಸಗಿಯವರು ವಹಿಸಿದ್ದರು.

<u>ಹಳೆಯ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಪಾಲಕರ ಸಮಾವೇಶ :</u> ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ ಸಕ್ರಿಯವಾಗಿದೆ.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

* ದಿನಾಂಕ : 08/10/2018 ರಂದು ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ 85 ವಿದ್ಯಾರ್ಥಿಗಳು ಆಗಮಿಸಿದ್ದರು.

*ದಿನಾಂಕ : 13/01/2019ರಂದು 2 ನೇ ಸಮಾವೇಶ ಕರೆಯಲಾಗಿತ್ತು. ಸಂಸ್ಥೆಯ ಅಭಿವೃದ್ಧಿಗಾಗಿ ಸಲಹೆ ಸೂಚನೆಗಳನ್ನು ಪಡೆಯಲಾಯಿತು.

* 1993 ನೇ ಸಾಲಿನ ಬಿ.ಎ.-3 ಪಾಸಾದ ವಿದ್ಯಾರ್ಥಿಗಳು ಗುರುವಂದನಾ ಕಾರ್ಯಕ್ರಮವನ್ನು ದಿನಾಂಕ : 03/02/2019 ರಂದು ಹಮ್ಮಿಕೊಂಡಿದ್ದರು. ಇವರು ಎಲ್ಲ ಪ್ರಾಧ್ಯಾಪಕರಿಗೆ ಸನ್ಮಾನಿಸಿ ಗುರುವಿನ ಪಾತ್ರವನ್ನು ಕೊಂಡಾಡಿದರು. ಪ್ರೊ. ಬಿ.ಎ.ಪಾಟೀಲ ಚೇರಮನರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ದಿನಾಂಕ : 24/02/2019ರಂದು ಪಾಲಕ-ಶಿಕ್ಷಕರ ಸಭೆಯನ್ನು ಆಯೋಜಿಸಲಾಗಿತ್ತು. 100 ಜನ ಪಾಲಕರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಶಿಕ್ಷಕ, ಪಾಲಕರ ಕರ್ತವ್ಯಗಳ ಬಗ್ಗೆ ಚರ್ಚಿಸಲಾಯಿತು. ಪ್ರೊ. ಟಿ.ಆರ್.ದರೇಕರ ಅವರು ಚೇರಮನರಾಗಿ ಕಾರ್ಯನಿರ್ವಹಿಸಿದ್ದಾರೆ.

ಯುಜಿಸಿ ಕೋಶದ ವರದಿ : ಯುಜಿಸಿ ಬೆಂಗಳೂರು ಇವರಿಂದ 12ನೇ ಯೋಜನೆಯಡಿಯಲ್ಲಿ ಮಂಜೂರಾದ ಒಳಾಂಗಣ ಕ್ರೀಡಾ ಭವನ (Indoor Sports Hall) ಅಂದಾಜು ರೂ. 1.5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದ್ದು, ಯುಜಿಸಿಯಿಂದ 70 ಲಕ್ಷದಷ್ಟು ಅನುದಾನ ಪಡೆದು, ಇದೀಗ ಪೂರ್ತಿಗೊಳ್ಳುವ ಹಂತದಲ್ಲಿದೆ. ಡಾ.ಎಸ್.ಓ.ಹಲಸಗಿ ಯು.ಜಿ.ಸಿ ಕೋಶದ ಚೇರ್ಮನ್‌ರಾಗಿದ್ದಾರೆ.

ಅಲ್ಲದೆ, ಯುಜಿಸಿಯಿಂದ ದೊರಕುವ ಹಲವಾರು ಅನುದಾನಗಳನ್ನು ಪಡೆದು, ಮಹಾವಿದ್ಯಾಲಯದಲ್ಲಿ ಪ್ರಗತಿಯ ಕಾರ್ಯಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿದ್ದೇವೆ.

2018-19 ನೇ ಸಾಲಿನ ಜ್ಞಾನಯೋಗಿ ಗ್ರಂಥಾಲಯದ ವಾರ್ಷಿಕ ವರದಿ :

* **ದಿನಾಂಕ 27/07/2018ರಂದು** ಗ್ರಂಥಾಲಯ ಸಲಹಾ ಸಮಿತಿಯನ್ನು ಪ್ರಾಚಾರ್ಯರಾದ ಡಾ.ಜಿ.ಜಿಕರಲಟ್ಟಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಸಮಿತಿಯ ಅಧ್ಯಕ್ಷರಾಗಿ ಡಾ.ಎಮ್.ಎಮ್.ಭೋಸಲೆ, ಉಪಾಧ್ಯಕ್ಷರಾಗಿ ಗ್ರಂಥಪಾಲಕರಾದ ಶ್ರೀ. ಪಿ.ಎಮ್.ದೊಡಮನಿ, ಸದಸ್ಯರಾಗಿ ಡಾ. ಆರ್.ಎಸ್.ಕಲ್ಲೋಳಿಕರ, ಪ್ರೊ. ಎಮ್.ಎಸ್.ಕುಂಬಾರ, ಪ್ರೊ. ಶ್ರೀಮತಿ. ಎಮ್.ವಾಯ್. ಜಂಗಮಶೆಟ್ಟಿಯವರನ್ನು ಆಯ್ಕೆ ಮಾಡಲಾಯಿತು.

* **2018-19ನೇ** ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಲಾ, ವಾಣಿಜ್ಯ, ವಿಜ್ಞಾನ ಹಾಗೂ ಬಿ.ಬಿ.ಎ ವಿಭಾಗಗಳಲ್ಲಿ ಒಟ್ಟು 592 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಮಹಾವಿದ್ಯಾಲಯದ ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳ ಸಲಹೆ ಮೇರೆಗೆ ಎಲ್ಲ ವಿಭಾಗಗಳಿಗೂ ಸಂಬಂಧಿಸಿದಂತೆ ಈ ವರ್ಷ 86,445 ಮೌಲ್ಯದ 467 ಪುಸ್ತಕಗಳನ್ನು ಖರೀದಿಸಲಾಯಿತು. ಇದರೊಂದಿಗೆ ನಮ್ಮ ಜ್ಞಾನಯೋಗಿ ಗ್ರಂಥಾಲಯವು ಒಟ್ಟು 28,911 ಪುಸ್ತಕಗಳು, 71-ಇ-ಪರಿಕರಗಳನ್ನು ಹೊಂದಿದೆ.

* **ದಿನಾಂಕ 12/08/2018 ರಂದು** ಡಾ.ಎಸ್.ಆರ್. ರಂಗನಾಥರ ಜನ್ಮದಿನವನ್ನು ಪ್ರಾಚಾರ್ಯರ ಮಾರ್ಗದರ್ಶನದಲ್ಲಿ 'ಪಠ್ಯ ಪುಸ್ತಕಗಳ ಪ್ರದರ್ಶನ' ಮಾಡಿ ಆಚರಿಸಲಾಯಿತು. ಗ್ರಂಥಪಾಲಕರು ರಂಗನಾಥರ ಸಾಧನೆ ಮತ್ತು ಗ್ರಂಥಾಲಯದ ಮಹತ್ವವನ್ನು ವಿವರಿಸಿದರು.

* **2018-19ನೇ** ವರ್ಷಕ್ಕೆ ಒಟ್ಟು ರೂ. 31,458 ಮೌಲ್ಯದ 19 ವಿಷಯಗಳ ನಿಯತಕಾಲಿಕೆಗಳು, ಕನ್ನಡ, ಮರಾಠಿ, ಆಂಗ್ಲ ವಿಷಯಗಳ ದಿನಪತ್ರಿಕೆಗಳನ್ನು ತರಿಸಲಾಗಿದೆ. ನಮ್ಮ ಗ್ರಂಥಾಲಯವು MHRD ಮತ್ತು 111 ಖರಗಪೂರ ಹಾಗೂ INFLBNET N-LIST ನೊಂದಣಿ ಹೊಂದಿದೆ.

ಸಿಬ್ಬಂದಿಯ ಶೈಕ್ಷಣಿಕ ಚಟುವಟಿಕೆಗಳು :

ಮಹಾವಿದ್ಯಾಲಯದ ಸಿಬ್ಬಂದಿ ವರ್ಗದವರ ಕ್ರೀಯಾ ಶೀಲತೆಯು ಅತ್ಯಂತ ಪ್ರಶಂಸನೀಯವಾಗಿದೆ. ನಮ್ಮ ಮಹಾವಿದ್ಯಾಲಯದ ಬಹಳಷು ಪ್ರಾಧ್ಯಾಪಕರು ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಾದ, ಪ್ರಶ್ನೆ ಪತ್ರಿಕೆ ಸಿದ್ಧತೆ, ಮುಖ್ಯ ಅಧೀಕ್ಷಕರು, ವಿಚಕ್ಷಕ ದಳದ ಚೇರಮನ್‌ರಾಗಿ ಮೌಲ್ಯಮಾಪನ ಕಾರ್ಯದ ಚೇರಮನ್‌ರಾಗಿ ಸೇವೆಯನ್ನು ಗೈದು ಮಹಾವಿದ್ಯಾಲಯದ ಘನತೆಯನ್ನು ಹೆಚ್ಚಿಸಿದ್ದಾರೆ. ಪ್ರಾಚಾರ್ಯರ ಜಿ.ಜಿ.ಕರಲಟ್ಟಿ, ಡಾ.ಎಸ್.ಓ.ಹಲಸಗಿ, ಪ್ರೊ.ಎಸ್.ಎಸ್.ಬಾಗನೆ, ಪ್ರೊ.ಟಿ.ಆರ್.ದರೇಕರ, ಪ್ರೊ.ಬಿ.ಎ.ಪಾಟೀಲ, ಪ್ರೊ.ವ್ಹಿ.ಎಸ್.ತುಗಶೆಟ್ಟಿ, ಡಾ.(ಶ್ರೀಮತಿ).ಡಿ.ಡಿನಗರಕರ, ಡಾ.ಎಸ್.ಪಿ.ತಳವಾರ,

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

ಡಾ.ಆರ್.ಎಸ್.ಕಲ್ಲೋಳಿಕರ ಮುಂತಾದವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬಿ.ಓ.ಇ ಸದಸ್ಯರಾಗಿ ಮತ್ತು ಚೇರಮನ್‌ರಾಗಿ ಕಾರ್ಯಗೈಯುತ್ತಿದ್ದಾರೆ.

ಡಾ.ಎಸ್.ಓ.ಹಲಸಗಿ, ಪ್ರೊ.ಟಿ.ಆರ್.ದರೇಕರ, ಪ್ರೊ.ಬಿ.ಎ.ಪಾಟೀಲರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ BOS ಸದಸ್ಯರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ನಮ್ಮ ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಲವಾರು ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಕಾರ್ಯಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪ್ರಬಂಧ ಮಂಡನೆ ಮಾಡುವುದರ ಮೂಲಕ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ವಿವಿಧ ಮಹಾವಿದ್ಯಾಲಯಗಳ ಸಹ ಪ್ರಾಧ್ಯಾಪಕರ ಆಯ್ಕೆ ಪ್ರಕ್ರಿಯೆಯಲ್ಲಿ ವಿಷಯ ತಜ್ಞರಾಗಿ ನಮ್ಮ ಪ್ರಾಧ್ಯಾಪಕರು ಭಾಗವಹಿಸಿದ್ದಾರೆ.

ಡಾ.ಜಿ.ಜಿ.ಕರಲಟ್ಟಿ, ಡಾ.ಎಸ್.ಓ.ಹಲಸಗಿ, ಡಾ. ಎಸ್.ಪಿ. ತಳವಾರ, ಪ್ರೊ.ಜೆ.ಕೆ.ಪಾಟೀಲ ಸಂಶೋಧನಾ ಲೇಖನಗಳು ISSN ಮತ್ತು ISBN ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಮಹಾವಿದ್ಯಾಲಯದ ಬಹುತೇಕ ಪ್ರಾಧ್ಯಾಪಕರು ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕ ಕಾಗವಾಡ ಘಟಕದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗ್ರಂಥ ಪ್ರಕಟಣೆ :

ಡಾ. ಎಸ್.ಓ. ಹಲಸಗಿಯವರು ಗುಲಬರ್ಗಾ, ಕೃಷ್ಣದೇವರಾಯ ಮತ್ತು ಅಕ್ಕ ಮಹಾದೇವಿ ವಿಶ್ವವಿದ್ಯಾಲಯದ ಬಿ.ಕಾಂ ಗಾಗಿ 8 ಪರಿಷ್ಕೃತ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮತ್ತು ಡಾ.ಶ್ರೀಮತಿ.ಡಿ.ಡಿನಗರಕರವರ ರಂಗತರಂಗಿಣಿ ಕೃತಿ ಬಿಡುಗಡೆಯಾಗಿದೆ.

ಈ ಎಲ್ಲ ಕಾರ್ಯಗಳಿಗೆ ಪೂಜ್ಯರ ಆಶೀರ್ವಾದ ಆಡಳಿತ ಮಂಡಳಿಯ ಸಕಾರಾತ್ಮಕ ಪ್ರೋತ್ಸಾಹ, ನುರಿತ ಹಾಗೂ ಕ್ರೀಯಾಶೀಲ ಅಧ್ಯಾಪಕ ವೃಂದ, ನಿರಂತರವಾಗಿ ಕಾರ್ಯಗೈಯುತ್ತಿರುವ ಕಚೇರಿ ಸಿಬ್ಬಂದಿಯ ಶ್ರಮ ಕಾರಣಭೂತವೆಂದು

ಎಲ್ಲರಿಗೂ ಧನ್ಯವಾದಗಳು

ವರದಿ – ಡಾ. ಎಸ್.ಓ. ಹಲಸಗಿ

ಪ್ರೊ.ವ್ಹಿ.ಎಸ್.ಶುಗಶೆಟ್ಟಿ

ಪ್ರಾಚಾರ್ಯರು ಡಾ.ಜಿ.ಜಿ.ಕರಲಟ್ಟಿ

Dr. S. O. Halasagi
I/c. PRINCIPAL,
Shivanand College,
Kagwad, Dist. Belgaum

Scanned by CamScanner